ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಕೊಡಲಾದ ಬಾಯಿ ಮಾತಿನ ಉತ್ತರಗಳು

ಕಾವೇರಿ ನೀರು ಸರಬರಾಜು ಯೋಜನೆ ೩ನೇ ಹಂತವನ್ನು ಕಾರ್ಯಗತ ಗೊಳಿಸುವ ಬಗ್ಗೆ.

೯ (೨). ಶ್ರೀ ಕೆ. ಹೆಚ್. ಪಾಟೀಲ್ (ಗದಗ್) ನಗರಾಭಿವೃದ್ಧಿ ಸಚಿವರು ದಯವಿಟ್ಟು ಉತ್ತರಿಸುವರೇ ?

ಬೆಂಗಳೂರು ನಗರಕ್ಕೆ ನೀರು ಸರಬರಾಜನ್ನು ಹೆಚ್ಚಿಸಲು ಕಾವೇರಿ ಯೋಜನೆಯ ಮೂರನೇ ಹಂತವನ್ನು ಕಾರ್ಯಗತಗೊಳಿಸುವ ಬಗ್ಗೆ ಸರ್ಕಾರ ಕೈಗೊಂಡಕ್ರಮಗಳು ಏನು ?

ಶ್ರೀ ಎ. ಲಕ್ಷ್ಮೀಸಾಗರ್ (ನಗರಾಭಿವೃದ್ಧಿ ಸಚಿವರು) .— ರೂ ೨೪೦ ಕೋಟಿ ಅಂದಾಜು ವೆಚ್ಚದ ಕಾವೇರಿ ನೀರು ಸರಬರಾಜು ಯೋಜನೆಯ ಮೂರನೆಯಹಂತಕ್ಕೆ ಕರ್ನಾಟಕ ರಾಜ್ಯ ಸರ್ಕಾರವು ತಾ. ೨೮–೬–೮೪ ರ ತನ್ನ ಆದೇಶದ ಮೂಲಕ ಮಂಜೂರಾತಿ ನೀಡಿದೆ. ಈ ಯೋಜನೆಯನ್ನು ಏಳನೆಯ ಪಂಚವಾರ್ಷಿಕ ಯೋಜನೆಯಲ್ಲಿ ಅಳವಡಿಸಲಾಗಿದ್ದು ೧೯೮೫–೮೬ ರ ವಾರ್ಷಿಕ ಕರಡು ಯೋಜನೆಯಲ್ಲಿ ರೂ. ೪೦೦ ಲಕ್ಷಗಳನ್ನು ಯೋಜಿಸಲಾಗಿದೆ. ಪ್ರಾರಂಭಿಕ ಕಾರ್ಯಗಳಾದ ತನಿಖೆ ಮತ್ತು ಸರ್ವೇಕ್ಷಣೆಗಳು ಮುಗಿದಿವೆ. ವಿಶ್ವಬ್ಯಾಂಕ್ ಸಹಾಯಕ್ಕಾಗಿ ಈ ಯೋಜನೆಯನ್ನು ಪರಿಂಶಿಡಲು ಭಾರತ ಸರ್ಕಾರವನ್ನು ಕೋರಲಾಗಿದೆ.

ಶ್ರೀ ಕೆ. ಹೆಚ್. ಪಾಟೀಲ್ .— ಮಾನ್ಯ ಅಧ್ಯಕ್ಷರೇ ಸುಮಾರು ೨೪೦ ಕೋಟಿ ರೂಪಾಯಿಗಳ ಈ ಯೋಜನೆಯನ್ನು ತೀವ್ರವಾಗಿ ಮುಗಿಸಲು ಪ್ರಯತ್ನ ಮಾಡುತ್ತೇವೆಂದು ಈಗಾಗಲೇ ಅನೇಕ ಸಲ ಆಶ್ವಾಸನೆಗಳನ್ನು ಕೊಟ್ಟಿದ್ದಾರೆ. ಆದರೆ ೧೯೮೫–೮೬ ನೇ ವಾರ್ಷಿಕ ಕರಡು ಯೋಜನೆಯಲ್ಲಿ ಇದಕ್ಕೆ ೪೦೦ ಲಕ್ಷ ರೂಪಾಯಿಗಳನ್ನು ಮಾತ್ರ ಇಟ್ಟಿದ್ದಾರೆ. ಅಂದರೆ ಈ ಕೆಲಸ ಮುಗಿಸಲು ಎಷ್ಟು ವರ್ಷಗಳು ಬೇಕಾಗುತ್ತದೆಂಬುದನ್ನು ಮಾನ್ಯ ಮಂತ್ರಿಗಳು ತಿಳಿಸುತ್ತಾರೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ .— ಮಾನ್ಯ ಸದಸ್ಯರ ಆತಂಕವನ್ನು ನಾನು ಗಮನಿಸಿದ್ದೇನೆ. ಜಾಗ್ರತೆ ಇಲ್ಲಿನ ಜನತೆಗೆ ನೀರನ್ನು ಪೂರೈಕೆ ಮಾಡಬೇಕೆಂಬ ತೀವ್ರತೆ ಅವರಿಗಿರುವಷ್ಟೇ ನಮಗೂ ಇದೆ. ಇದಕ್ಕೆ ೨೪೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಇಷ್ಟೊಂದು ಹಣವನ್ನು ರಾಜ್ಯಸರ್ಕಾರವೇ ಭರಿಸುವುದಕ್ಕೆ ಸಾಧ್ಯವಾಗದಿರುವ ಸನ್ನಿವೇಶದಲ್ಲಿ ನಾವು ಕೇಂದ್ರ ಸರ್ಕಾರದ ನೆರವನ್ನು ಕೇಳಿದ್ದೇವೆ. ಈ ಖರ್ಚನ್ನು ರಾಜ್ಯ ಸರ್ಕಾರವು ಭರಿಸುವುದಕ್ಕೆ ಸಾಧ್ಯವಾಗದೆ ಇರುವುದರಿಂದ ನಾವು ಕೇಂದ್ರ ಸರ್ಕಾರಕ್ಕೆ, ವಿಶ್ವಬ್ಯಾಂಕ್ ನೆರವನ್ನು ಕೊಡಿಸಬೇಕೆಂದು ಕೇಳಿಕೊಂಡಿದ್ದೇವೆ. ಮಾನ್ಯ ಸದಸ್ಯರಾದ ಕೆ. ಹೆಚ್. ಪಾಟೀಲರು ಬಹಳ ಅನುಭವ ಇರತಕ್ಕಂತ ವ್ಯಕ್ತಿಗಳು, ಅವರು ಕೇಂದ್ರ ಸರ್ಕಾರದ ಮೇಲೆ ತಮ್ಮ ಪ್ರಭಾವವನ್ನು ಬೀರಿ ಈ ಯೋಜನೆಗೆ ಆದಷ್ಟು ಬೇಗ ಹಣಕೊಡಿಸಲು ಏರ್ಪಾಡನ್ನು ಮಾಡಬೇಕೆಂದು ಅವರಲ್ಲಿ ಮನವಿ ಮಾಡಿಕೊಳ್ಳುತ್ತೇನೆ

ಶ್ರೀ ಕೆ. ಹೆಚ್. ಪಾಟೀಲ್ .— ನೀವು ಈ ಯೋಜನೆಗೆ ೪ ಕೋಟಿ ರೂಪಾಯಿಗಳನ್ನು ನಿಗದಿ ಮಾಡಿದ್ದೇವೆಂದು ಹೇಳಿದ್ದೀರಿ, ಈ ರೀತಿ ನೀವು ಕಡಿಮೆ ಹಣವನ್ನು ಒದಗಿಸಿದರೆ ಇನ್ನೂ ೬೦ ವರ್ಷಗಳಾದರೂ ಈ ಯೋಜನೆಯನ್ನು ಪೂರೈಸಲು ಸಮಯ ಬೇಕಾಗುತ್ತದೆ. ತಾವು ಅನೇಕ ಯೋಜನೆಗಳಿಗೆ ತಮಗೆ ಬೇಕಾದಂತೆ ಖರ್ಚುಮಾಡಿ ಮಹತ್ವವಾದ ಯೋಜನೆಗಳಿಗೆ ಹಣ ಇಲ್ಲವೆಂದರೆ ಹೇಗೆ ? ಮೊದಲು ನೀರು ತಾನೆ ಬೇಕು ! ಆದುದರಿಂದ ಕಾವೇರಿ ೩ನೇ ಹಂತದ ಯೋಜನೆಗೆ ತೀವ್ರವಾದ ಕಾರ್ಯ ಕ್ರಮಕ್ಕಾಗಿ ಯತ್ನಿಸಬೇಕು. ಮಾನ್ಯ ಮಂತ್ರಿವರ್ಯರವರ ಮೇಲೆ ನನಗೆ ವಿಶ್ವಾಸ ಇದೆ. ಅವರು ಬೇಗ ಕೆಲಸ ಮುಗಿಸಬೇಕು. ಈ ಕಾವೇರಿ ೩ನೇ ಹಂತದ ಯೋಜನೆಯು ಮುಗಿಯಲು ಎಷ್ಟು ವರ್ಷಗಳಲ್ಲಿ ಮುಗಿಸುತ್ತೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಎ. ಲಕ್ಷ್ಮೀಸಾಗರ್ .— ಮಾನ್ಯ ಅಧ್ಯಕ್ಷರೇ, ಕಾವೇರಿ ೩ನೇ ಹಂತದ ಯೋಜನೆಗೆ ೧೯೮೫–೮೬ ರಲ್ಲಿ ಖರ್ಚು ಮಾಡಲು ೪ ಕೋಟಿ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನು ಉಳಿದ ಖರ್ಚನ್ನು ತೂಗಿಸಿಕೊಳ್ಳಲು ವಿಶ್ವ ಬ್ಯಾಂಕ್ ನೆರವನ್ನು ಕೊಡಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ಕೇಳಿಕೊಂಡಿದ್ದೇವೆ, ಅವರು ಆದಷ್ಟು ಬೇಗ ಹಣವನ್ನು ಪೂರೈಸಿದರೆ ೭ನೇ ಪಂಚವಾರ್ಷಿಕ ಯೋಜನೆಯಂ

ಮುಗಿಯುವುದರೊಳಗಾಗಿ ಈ ಕೆಲಸವನ್ನು ಪೂರೈಸುವುದಕ್ಕೆ ಸಾಧ್ಯವಾಗುತ್ತದೆ. ಈ ಯೋಜನೆ ಬಗ್ಗೆ ಎಲ್ಲಾ ಸಾಧನೆಗಳನ್ನು ಮಾಡಿ ಇಟ್ಟುಕೊಂಡಿದ್ದೇವೆ. ಟೆಂಡರ್ ಕರೆಯುವುದನ್ನು, ಕಾಂಪೋನೆಂಟ್ ಎಷ್ಟು ಬೇಕು ಎಂಬುದೆಲ್ಲಾ ಸಿದ್ಧವಾಗಿದೆ. ಕೇಂದ್ರ ಸರ್ಕಾರದವರು Go ಎಂದು ಹೇಳಿದ ತಕ್ಷಣ ನಾವು ಕೆಲಸ ಶುರು ಮಾಡುತ್ತೇವೆ. ಅದಕ್ಕೆ ಮಾನ್ಯ ಸದಸ್ಯರು ಸಹಾಯ ಮಾಡಬೇಕು. ಕೇಂದ್ರಸರ್ಕಾರವು ಪೂರೈಸುವ ಒಟ್ಟು ೮೦ ಕೋಟಿ ರೂಪಾಯಿಗಳಲ್ಲಿ ಈಗಾಗಲೇ ೪ ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದೆ. ರಾಜ್ಯ ಸರ್ಕಾರವು ಒದಗಿಸಲಾಗುವ ೮೦ ಕೋಟಿ ರೂಪಾಯಿಗಳಲ್ಲಿ ೫೦ ಕೋಟಿ ರೂಪಾಯಿಗಳನ್ನು ಎಲ್. ಐ. ಸಿ. ಯಿಂದ ಪಡೆದುಕೊಳ್ಳಲು ಈಗಾಗಲೇ ಅವರನ್ನು ಕೇಳಿದ್ದೇವೆ. ಇನ್ನು ಉಳಿದ ೩೦ ಕೋಟಿ ರೂಪಾಯಿಗಳನ್ನು ಬೆಂಗಳೂರು ನಗರ ಕಾರ್ಪೊರೇಷನ್ ಒದಗಿಸಿಕೊಡುತ್ತದೆ. ಒಟ್ಟು ಈ ಕಾವೇರಿ ೩ ನೇ ಯೋಜನೆಯು ಪೂರ್ಣವಾಗಬೇಕಾದರೆ ೨೪೦ ಕೋಟಿ ರೂಪಾಯಿಗಳು ಬೇಕಾಗುತ್ತವೆ. ಈ ಯೋಜನೆಯು ಪ್ರಾರಂಭ ಮಾಡುವುದಕ್ಕೆ ನಮ್ಮಿಂದ ಏನು ತಡವಾಗಿಲ್ಲ ಕೇಂದ್ರ ಸರ್ಕಾರದವರು ನಿಮಗೆ ಹಣ ಕೊಡುತ್ತೇವೆಂದು ಹೇಳಿದ ತಕ್ಷಣ ಕೆಲಸ ಶುರು ಮಾಡುತ್ತೇವೆ ಸ್ವಾಮಿ.

ಶ್ರೀ ಕೆ. ಕೆ. ಜಾರ್ಜ್ — ಈ ಕಾವೇರಿ ೩ ನೇ ಹಂತದ ಯೋಜನೆಯಿಂದ ಬೆಂಗಳೂರು ನಗರದ ನೀರಿನ ಸಮಸ್ಯೆಯನ್ನು ಪರಿಹಾರ ಮಾಡಲು ಸಾಧ್ಯವಿದೆಯೇ ?

ಶ್ರೀ ಎ. ಲಕ್ಷ್ಮೀಸಾಗರ್ .— ಕಾವೇರಿ ನೀರಿನ ೩ ನೇ ಹಂತದ ಕೆಲಸ ಕಾರ್ಯಗತವಾದರೆ, ಈಗಿರುವ ನೀರಿನ ಸರಬರಾಜಿನ ಪ್ರಮಾಣಕ್ಕಿಂತ ೬೦ ಮಿಲಿಯನ್ ಗ್ಯಾಲನ್‌ನಷ್ಟು ಹೆಚ್ಚಾಗುತ್ತದೆ. ಮೊದಲನೇ ಹಂತದಿಂದ ೩೦ ಮಿಲಿಯನ್ ಗ್ಯಾಲನ್‌ನಷ್ಟು ನೀರು ಬರುತ್ತಿತ್ತು, ೨ ನೇ ಹಂತದಿಂದ ಮತ್ತೆ ೩೦ ಮಿಲಿಯನ್ ಗಾಲನ್‌ನಷ್ಟು ನೀರು ಹೆಚ್ಚಾಯಿತು, ಈಗ ೩ ನೇ ಹಂತದಲ್ಲಿ ೬೦ ಮಿಲಿಯನ್ ಗ್ಯಾಲನ್‌ನಷ್ಟು ಹೆಚ್ಚು ನೀರು ಬರುವ ಸಾಧ್ಯತೆ ಇದೆ. ಮಾನ್ಯ ಸದಸ್ಯರು ಈ ಯೋಜನೆ ಪ್ರಾರಂಭವಾದಮೇಲೂ ಬೆಂಗಳೂರು ಜನತೆಯ ನೀರಿನ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಾಗುವುದೇ ಇಲ್ಲವೇ ಎಂದು ಕೇಳಿದ್ದಾರೆ. ಬೆಂಗಳೂರು ನಗರದಲ್ಲಿ ದಿನೇ ದಿನೇ ಜನಸಂಖ್ಯೆ ಹೆಚ್ಚುತ್ತಿರುವುದು ಮಾನ್ಯ ಸದಸ್ಯರಿಗೂ ಗೊತ್ತಿದೆ, ಈ ಜನಸಂಖ್ಯೆಯನ್ನು ತಡೆಯುವುದಕ್ಕೆ ಮಾನ್ಯ ಸದಸ್ಯರು ಪ್ರಯತ್ನ ಮಾಡಬೇಕು ಎಂದು ಮನವಿ ಮಾಡಿಕೊಳ್ಳುತ್ತೇನೆ.

ರಾಜ್ಯದಲ್ಲಿ ರೇಷ್ಮೆ ಮೊಟ್ಟೆಗಳ ಉತ್ಪಾದನೆ ಬಗ್ಗೆ

ಶ್ರೀ ಬಿ. ರಾಜಂಗೌಡ (ಹನೂರು).— ರೇಷ್ಮೆ ಖಾತೆಯ ರಾಜ್ಯ ಸಚಿವರು ದಯವಿಟ್ಟು ಉತ್ತರಿಸುವರೇ.

(ಅ) ೧೯೮೩-೮೪ರಲ್ಲಿ ಸರ್ಕಾರ ಮತ್ತು ಖಾಸಗಿ ಬಿತ್ತನೆ ಕೋಠಿ ಉತ್ಪಾದಿಸಿರುವ ರೇಷ್ಮೆ ಮೊಟ್ಟೆಗಳ ಪ್ರಮಾಣವೆಷ್ಟು.

(ಆ) ಆ ಪೈಕಿ ನಿಷ್ಪ್ರಯೋಜಕವಾದವೆಷ್ಟು.

(ಇ) ಇದರಿಂದ ಸರ್ಕಾರಕ್ಕೆ ಉಂಟಾಗಿರುವ ಲಾಭ ಮತ್ತು ನಷ್ಟ ಎಷ್ಟು.

(ಈ) ರಾಜ್ಯದಲ್ಲಿ ೧ನೇ ಏಪ್ರಿಲ್ ೧೯೮೪ ರಿಂದ ಈವರೆಗೆ ರೇಷ್ಮೆ ಎನಿಮಯ ಕೇಂದ್ರಗಳಲ್ಲಿ ವರ್ತಕರು ಕೊಂಡು ಕೊಂಡಿರುವ ರೇಷ್ಮೆಯ ಪ್ರಮಾಣವೆಷ್ಟು ಹಾಗೂ ಬೇರೆ ರಾಜ್ಯಗಳಲ್ಲಿರುವ ಕರ್ನಾಟಕದ ಶಾಖೆಗಳಿಗೆ ಎಷ್ಟೆಷ್ಟು ಸರಬರಾಜು ಮಾಡಲಾಗಿದೆ.

(ಉ) ೧ನೇ ಜನವರಿ ೧೯೮೩ ರಿಂದ ೧೫ನೇ ಮಾರ್ಚ್ ೧೯೮೫ ರವರೆವಿಗೆ ರಾಜ್ಯದ ಎಲ್ಲಾ ಮಾರುಕಟ್ಟೆಗಳಿಂದ ಬಂದ ರೇಷ್ಮೆಗೂಡಿನ ಪ್ರಮಾಣ ಎಷ್ಟು. ಮಾರಾಟವಾಗಿರುವುದೆಷ್ಟು ಮತ್ತು ಇದರಿಂದ ಗಳಿಸಿರುವ ದಳ್ಳಾಳಿ ದರ ಎಷ್ಟು ?